**ದಿನಾಂಕ 03.07.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಸಿ.ಇ. ವಕೀಲರಿಂದಃ**

1. ನನ್ನ ಗಂಡನ ಹೆಸರು ಚಂದ್ರನಾಯ್ಕ. ನನ್ನ ಗಂಡನ ತಂದೆಯ ಹೆಸರು ರಾಮನಾಯ್ಕ. ನನ್ನ ಗಂಡನ ತಾಯಿಯ ಹೆಸರು ಸಾಕಿಬಾಯಿ. ರಾಮನಾಯ್ಕನಿಗೆ 4 ಜನ ಗಂಡು ಮಕ್ಕಳು, 3 ಜನ ಹೆಣ್ಣುಮಕ್ಕಳು, ಅವರುಗಳೆಂದರೆ, ಲಕ್ಷ್ಮನಾಯ್ಕ, ಸಾಮ್ಯಾನಾಯ್ಕ, ಸೇವಾನಾಯ್ಕ, ಚಂದ್ರನಾಯ್ಕ ಮತ್ತು ರೂಪ್ಲಿಬಾಯಿ, ಪುಟ್ಟಮ್ಮ, ಸೀತಮ್ಮ. ರಾಮನಾಯ್ಕನ 3 ಜನ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದು, ಅವರುಗಳು ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ಅವರ 2 ನೇ ಮಗಳು ರೂಪ್ಲಿಬಾಯಿಯನ್ನು ಮಾನಂಗಿತಾಂಡಕ್ಕೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಪುಟ್ಟಮ್ಮನನ್ನು ಮತ್ತು ಸೀತಮ್ಮನನ್ನು ಮಧುಗಿರಿ ತಾಲ್ಲೂಕು, ಐಡಿಹಳ್ಳಿ, ದಾದಾಗೊಂಡನಹಳ್ಳಿ ಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ.

2. ರಾಮನಾಯ್ಕನ ಮಗಳು ಪುಟ್ಟಮ್ಮನಿಗೆ ಇಬ್ಬರು ಹೆಣ್ಣುಮಕ್ಕಳು ಎಂದರೆ ಸರಿ. ಅವರುಗಳೆಂದರೆ ಜಯಮ್ಮ ಮತ್ತು ಲಕ್ಷ್ಮಮ್ಮ. ಪುಟ್ಟಮ್ಮನ ಹಿರಿಯ ಮಗಳಾದ ಜಯಮ್ಮನನ್ನು ಚಂಧ್ರಾನಾಯ್ಕನಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿಯಲ್ಲ. ಜಯಮ್ಮ ಈ ಕೇಸಿನ ವಾದಿ ಎಂದರೆ ಸರಿಯಲ್ಲ. ನಾನು ಆಕೆಯು ಮದುವೆಯಾಗಿರುವುದನ್ನು ಎಂದಿಗೂ ನೋಡಿಲ್ಲ. ವಾದಿ ಚಂಧ್ರಾನಾಯ್ಕನ ಅಕ್ಕನ ಮಗಳು ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಚಂಧ್ರಾನಾಯ್ಕನಿಗೆ ಸದರಿ ಪುಟ್ಟಮ್ಮನ ಮಗಳಾದ ಜಯಮ್ಮನನ್ನು ಕೊಟ್ಟು ಮದುವೆ ಮಾಡಿದ್ದು, ಆಕೆಯೇ ಚಂಧ್ರಾನಾಯ್ಕನ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ, ಚಂಧ್ರಾನಾಯ್ಕನ ಹೆಂಡತಿ ನಾನೇ ಎಂದು ಸಾಕ್ಷಿ ನುಡಿಯುತ್ತಾರೆ.

3. ಚಂಧ್ರಾನಾಯ್ಕನಿಗೆ 2 ಐಟಂ ಆಸ್ತಿ ಇದೆ, ಅದರ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ರಾಮನಾಯ್ಕನ ಗಂಡು ಮಕ್ಕಳು ಭಾಗವನ್ನು ಯಾವ ದಿನಾಂಕದಂದು ಮತ್ತು ಎಷ್ಟು ವರ್ಷದ ಹಿಂದೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಸುಮಾರು 15 ವರ್ಷಗಳಾಗಿದೆ ಎಂದು

ನುಡಿಯುತ್ತಾರೆ. ನನ್ನ ಗಂಡ ಎಂದು ಹೇಳುವ ಚಂದ್ರಾನಾಯ್ಕುನಿಗೆ ಭಾಗದಲ್ಲಿ ಯಾವ ಯಾವ ಸರ್ವೆ ನಂಬರ್ ಗಳು ಬಂದಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಚಂದ್ರಾನಾಯ್ಕುನಿಗೆ 4 ಎಕರೆ ಜಮೀನು ಬಂದಿದೆ. ರಾಮನಾಯ್ಕುನ ಗಂಡು ಮಕ್ಕಳು 07.12.1990 ರ ಸಾಲಿನಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. 04.08.2011 ನೇ ಸಾಲಿನಲ್ಲಿ ನಾನು ಮತ್ತು ರಾಮನಾಯ್ಕುನ ಗಂಡು ಮಕ್ಕಳು ಸೇರಿಕೊಂಡು ಮತ್ತೊಂದು ಪಾರಿಕತ್ತು ಮಾಡಿಕೊಂಡಿದ್ದೇವೆ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**